

‘ಐಸ್‌ಲ್ಯಾಂಡ್’ನ ಹಿಮರಾಶಿ ಮೇಲೆ ನಡೆಯುವುದೇ ರೋಚಕ...

# ಹಿಮಲೋಕದ ತೇರು ಐಸ್‌ಲ್ಯಾಂಡ್

**ಪ್ರಾಕೃತಿಕ ವೈರುಧ್ಯಗಳನ್ನು ಒಡಲಲ್ಲಿಟ್ಟುಕೊಂಡ ಮಾಯಾಜಗತ್ತು ‘ಐಸ್‌ಲ್ಯಾಂಡ್’. ಹಿಮರಾಶಿ, ನೀರ್ಗಲ್ಲು, ಬೆಟ್ಟಗುಡ್ಡ, ಜಲಪಾತ, ಕಪ್ಪು ಕಿನಾರೆ, ಬಿಸಿನೀರ ಕಣಿವೆ... ಅಸಂಖ್ಯಾತ ಭೂದೃಶ್ಯಗಳ ಅಚ್ಚರಿಯ ನೆಲ ಈ ದ್ವೀಪರಾಷ್ಟ್ರದ್ದು.**

**■ ಎಸ್‌. ಮಾನಸ**

ಯಾವುದಾದರೂ ವಿಶಿಷ್ಟ, ಅನನ್ಯ ದೇಶಕ್ಕೆ ಪ್ರವಾಸ ಹೋಗಬೇಕೆಂಬ ಹಂಬಲ, ನಮ್ಮನ್ನು ಬೆಂಗಳೂರಿನಿಂದ ‘ಐಸ್‌ಲ್ಯಾಂಡ್’ ಎಂಬ ಮಾಯಾಲೋಕಕ್ಕೆ ತಂದು ನಿಲ್ಲಿಸಿತ್ತು.

‘ಐಸ್‌ಲ್ಯಾಂಡ್’– ಹೆಸರೇ ಹೇಳುವಂತೆ ಇದು ಹಿಮಭೂಮಿ. ನೀರ್ಗಲ್ಲುಗಳ (ಗ್ಲೇಸಿಯರ್) ದ್ವೀಪರಾಷ್ಟ್ರ. ಒಂದೊಂದು ಋತುವಿನಲ್ಲೂ ಬಣ್ಣ ಬದಲಿಸುವ ಪ್ರಕೃತಿ ಎಂಬ ಮಾಯಾಂಗನೆ. ‘ಕ್ಷಣಚಿತ್ತಂ ಕ್ಷಣಪಿತ್ಥಂ’ ಎನ್ನುವಂತೆ, ಒಂದು ಕ್ಷಣ ಹಿತಕರ ಹವಾಗುಣ, ಮರುಕ್ಷಣವೇ ಬಿರುಗಾಳಿ. ಮತ್ತೊಂದು ಕ್ಷಣ, ಹಿಮಗಾಳಿಯ ಆರ್ಭಟ. ತಂಪಿನ ನಡುವೆ ಜ್ವಾಲಾಮುಖಿ–ಶಿಲಾರಸ, ಬಿಸಿನೀರಿನ ಬುಗ್ಗೆ – ಒಟ್ಟಾರೆ ವೈರುಧ್ಯಗಳ ಸಂಗಮ ಈ ಐಸ್‌ಲ್ಯಾಂಡ್.

ಬೆಂಗಳೂರಿನಿಂದ ಐಸ್‌ಲ್ಯಾಂಡ್ ದ್ವೀಪಕ್ಕೆ ಹೋಗಲು 9 ಗಂಟೆಗಳ ವಿಮಾನ ಪ್ರಯಾಣ, ಜರ್ಮನಿಯ ಫ್ರಾಂಕ್‌ಫರ್ಟ್ ತಲುಪಿಸುತ್ತದೆ. ಅಲ್ಲಿಂದ 4 ಗಂಟೆ ನಂತರ ಈ ಸುಂದರ ದ್ವೀಪದ ಹೆಬ್ಬಾಗಿಲಾದ ‘ಕೆಫ್ಲಾವಿಕ್’ ಎಂಬ ಪ್ರಾಂತ್ಯದ ವಿಮಾನ ನಿಲ್ದಾಣದಲ್ಲಿ ಇಳಿಸುತ್ತದೆ. ಇಡೀ ದ್ವೀಪದ ಪ್ರವಾಸಕ್ಕೆ ಅವಶ್ಯವಾದ ವಾಹನವನ್ನು (ಕಾರು) ಬಾಡಿಗೆ ಆಧಾರದಲ್ಲಿ ಪಡೆದು, ಈ ಅಪರಿಚಿತ ದ್ವೀಪದಲ್ಲಿ ನಾವೇ ಚಲಾಯಿಸಿಕೊಂಡು ಹೋಗಬೇಕಿರುವುದು ಈ ಪ್ರವಾಸದ ವೈಶಿಷ್ಟ್ಯ. ಈ ದೇಶದಲ್ಲಿ ಬಲಭಾಗದ ವಾಹನ ಚಾಲನೆಗೆ ಹೊಂದಿಕೊಳ್ಳುವುದು ಶುರುವಿನಲ್ಲಿ ಭಾರೀ ಕಷ್ಟ.

ಐಸ್‌ಲ್ಯಾಂಡ್‌ನ ಬಹುಪಾಲು ಜನಸಂಖ್ಯೆ, ದೇಶದ ರಾಜಧಾನಿ ರೆಕ್ಜಾವಿಕ್ ಮತ್ತು ಕೆಫ್ಲಾನಿಕ್ ನಗರಗಳಲ್ಲಿದೆ. ಉಳಿದ ಪ್ರದೇಶಗಳಲ್ಲಿ ಜನಸಂಖ್ಯೆ ವಿರಳ. ಅವಶ್ಯಕ ಆಹಾರ ಪದಾರ್ಥಗಳ ಖರೀದಿ ಕಷ್ಟ. ಆಹಾರ ಪದಾರ್ಥಗಳನ್ನೊಳಗೊಂಡಂತೆ ಎಲ್ಲವನ್ನೂ ಡೆನ್ಮಾರ್ಕ್ ಮುಂತಾದ ದೇಶಗಳಿಂದ